# 'ಶ್ರೀರಾಮಕೃಷ್ಣ ವಚನವೇದ' ಭಾವಧಾರೆ - 5

ಸ್ವಾಮಿ ನಿತ್ಯಸ್ಥಾನಂದ

## ನಿಜವಾದ ಜ್ಞಾನ

ಶ್ರೀರಾಮಕೃಷ್ಣರು 'ಮ'ರ ಪತ್ನಿಯ ಬಗ್ಗೆ 'ಆಕೆ ಎಂಥವಳು' ಎಂದು ಕೇಳಿದಾಗ 'ಮ' ''ಒಳ್ಳೆಯವಳು, ಆದರೆ ಅಜ್ಞಾನಿ'' ಎಂದು ಉತ್ತರಿಸುತ್ತಾರೆ. ಆಗ ಶ್ರೀರಾಮಕೃಷ್ಣರು ತಿರಸ್ಕಾರದ ಧ್ವನಿಯಲ್ಲಿ, ''ನೀನು ಜ್ಞಾನಿಯೊ?'' ಎಂದು ಹೇಳಿದಾಗ ಅವರ ಅಹಂಕಾರಕ್ಕೆ ಮೂರನೆಯ ಪೆಟ್ಟು ಬಿತ್ತು. 'ಮ' ಇನ್ನೂ ನಿಜವಾದ ಜ್ಞಾನ ಎಂದರೆ ಏನು ಎಂಬುದನ್ನು ತಿಳಿಯಬೇಕಿತ್ತು. ಶ್ರೀರಾಮಕೃಷ್ಣರ ದೃಷ್ಟಿಯಲ್ಲಿ ದೇವರನ್ನು ತಿಳಿಯುವುದೇ ನಿಜವಾದ ಜ್ಞಾನ, ಉಳಿದುದೆಲ್ಲ ಅಜ್ಞಾನವೇ. ಏಕೆಂದರೆ ಇಂದ್ರಿಯ-ಮನಸ್ಸು-ಬುದ್ಧಿಗಳಿಂದ ತಿಳಿಯುವುದೆಲ್ಲವೂ ಅಜ್ಞಾನದಿಂದ ಉಂಟಾಗಿರುವ ಸಾಪೇಕ್ಷ ಜಗತ್ತಿಗೆ ಸಂಬಂಧಪಟ್ಟಿರುವುದು. ಆದ್ದರಿಂದ ಅದಕ್ಕೆ ಸಂಬಂಧಪಟ್ಟ ಜ್ಞಾನವೂ ಅಜ್ಞಾನವೇ ಆಗಿರಬೇಕು. ಹಗ್ಗವನ್ನು ನೋಡಿ ಅದನ್ನು ಹಾವೆಂದು ಭ್ರಮಿಸಿದರೆ ಅದನ್ನು ಜ್ಞಾನವೆಂದು ಕರೆಯಲಾಗುವುದೆ? ಹಾಗೆಯೇ ಪರಬ್ರಹ್ಮ ವಸ್ತುವನ್ನೇ ನಾವು ಜಗದ್ರೂಪದಲ್ಲಿ ಕಂಡು ಅನುಭವಿಸುತ್ತಿದ್ದೇವೆ. ನಾವು ನೋಡುವ ಹಗ್ಗವೂ ಭ್ರಮೆಯೇ. ಅದು ಎಲ್ಲರಿಗೂ ಹಗ್ಗವಾಗಿಯೇ ಕಾಣುವುದರಿಂದ ಅದೊಂದು ಸಾಮೂಹಿಕ ಭ್ರಮೆ. (collective illusion) ಎಂದು ಹೇಳಬಹುದು. ಆದರೆ ಹಾವು ಯಾವನೊ ಒಬ್ಬನಿಗೆ ಕಾಣುವುದರಿಂದ ಅದನ್ನು ವೈಯಕ್ತಿಕ ಭ್ರಮೆ (induvidual illusion) ಎಂದು ಕರೆಯಬಹುದು. ಆದ್ದರಿಂದ ಮುಂಡಕೋಪನಿಷತ್ ಜ್ಞಾನವನ್ನು ಪರಾವಿದ್ಯೆ ಮತ್ತು ಅಪರಾ ವಿದ್ಯೆ ಎಂದು ವಿಂಗಡಿಸಿ, ಎಲ್ಲ ಜ್ಞಾನವನ್ನು — ಶಾಸ್ತ್ರಜ್ಞಾನವನ್ನೂ ಕೂಡ — ಅಪರಾ ವಿದ್ಯೆಯ ವರ್ಗಕ್ಕೆ ಸೇರಿಸಿ, ಬ್ರಹ್ಮಜ್ಞಾನವೊಂದನ್ನೇ ಪರಾವಿದ್ಯೆ ಎಂದು ಪರಿಗಣಿಸುತ್ತದೆ. (**'ಅಥ ಪರಾ ಯಯಾ ತದಕ್ಷರಂ ಅಧಿಗಮ್ಯತೇ'** *(ಮುಂಡಕ, ೧.೧.೫)*.



ಜ್ಞಾನದ ಮೂರು ಹಂತಗಳನ್ನು ನಾವು ಗುರುತಿಸಬಹುದು: ಇಂದ್ರಿಯ ಜ್ಞಾನ, ಬೌದ್ಧಿಕ ಜ್ಞಾನ ಮತ್ತು ಅನುಭವ ಜ್ಞಾನ. ಅಗ್ನಿಯನ್ನು ನೋಡುವುದು ಇಂದ್ರಿಯ ಜ್ಞಾನ, ಅದನ್ನು ವೈಜ್ಞಾನಿಕವಾಗಿ ಅರಿಯುವುದು ಬೌದ್ಧಿಕ ಜ್ಞಾನ, ಹಾಗೂ ಅದರ ಶಾಖವನ್ನು ಅನುಭವಿಸಿ ಅದರ ಪ್ರಯೋಜನವನ್ನು ಪಡೆಯುವುದು ಅನುಭವ ಜ್ಞಾನ. ಹಾಗೆಯೇ ದೇವರ ಬಗ್ಗೆ ಕೇಳುವುದು ಇಂದ್ರಿಯಜ್ಞಾನ, ಶ್ರವಣ. ಇದನ್ನು ಮನನದ ಮೂಲಕ ಯುಕ್ತಿಪೂರ್ವಕವಾಗಿ ಅರ್ಥಮಾಡಿಕೊಂಡು ಅಂತರ್ನಿಶ್ಚಿತತೆಯನ್ನು ಪಡೆಯುವುದು ಬೌದ್ಧಿಕ ಜ್ಞಾನ. ಹಾಗೆಯೇ ಸಾಧನೆಯ ಮೂಲಕ ದೇವರ ಅಥವಾ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದು ಅನುಭವ ಜ್ಞಾನ. ಕೋಪದ ಬಗ್ಗೆ ಎಷ್ಟೇ ಕೇಳಬಹುದು, ಮನಶ್ಶಾಸ್ತ್ರೀಯವಾಗಿ ಅದನ್ನು ಅರಿಯಬಹುದು, ಆದರೆ ನಮಗೆ ಕೋಪ ಬಂದಾಗಲೇ ಅದರ ಅನುಭವಜ್ಞಾನವಾಗುವುದು. ಶ್ರೀರಾಮಕೃಷ್ಣರು ಭಗವದನುಭವ ಜ್ಞಾನವನ್ನೇ ನಿಜವಾದ ಜ್ಞಾನವೆಂದು ಪರಿಗಣಿಸುತ್ತಿದ್ದರು.

## ಭಗವತ್ಕಲ್ಪನೆಯಲ್ಲಿ ವೈವಿಧ್ಯತೆ

ಶ್ರೀರಾಮಕೃಷ್ಣರು ಮಾತು ಮುಂದುವರಿಸಿ ಹೇಳುತ್ತಿದ್ದಾರೆ: ''ತಿಳಿದುಕೊ, ನಿರಾಕಾರವೂ ಸತ್ಯ, ಸಾಕಾರವೂ ಸತ್ಯ. ಯಾವುದರಲ್ಲಿ ವಿಶ್ವಾಸವೋ ಅದರಲ್ಲಿ ದೃಢಬುದ್ಧಿಯಿಡು.''

ಅನೇಕ ಬಗೆಯ ಭಗವತ್ಕಲ್ಪನೆಗಳಿವೆ : ಸಾಕಾರ, ನಿರಾಕಾರ, ಸಗುಣ, ನಿರ್ಗುಣ ಇತ್ಯಾದಿ ಇತ್ಯಾದಿ. ಕೆಲವರು ದೇವರು ನಿರ್ಗುಣ ಮತ್ತು ನಿರಾಕಾರ ಎಂದು ನಂಬುತ್ತಾರೆ. ಇನ್ನು ಕೆಲವರು ದೇವರು ಸಗುಣ, ಆದರೆ ನಿರಾಕಾರ ಎಂದು ನಂಬುತ್ತಾರೆ (ಉದಾಃ ಬ್ರಹ್ಮ ಸಮಾಜ). ಮತ್ತೆ ಕೆಲವರು ದೇವರು ಸಗುಣನೂ ಹೌದು, ಸಾಕಾರನೂ ಹೌದು ಎಂದು ನಂಬುತ್ತಾರೆ. ಇಂದ್ರಿಯಗ್ರಾಹ್ಯವಾದುದು ಸಾಕಾರ — ರೂಪ, ಶಬ್ದ ಇತ್ಯಾದಿ. ಬುದ್ಧಿಗ್ರಾಹ್ಯವಾದುದು ಸಗುಣ-ನಿರಾಕಾರ — ಅಮೂರ್ತ ಭಾವನೆಗಳು. ಇವುಗಳೆಲ್ಲವೂ ಮನೋಬುದ್ಧೀಂದ್ರಿಯ ಗ್ರಾಹ್ಯವಾದುದರಿಂದ ಮಿತಿಗೆ ಒಳಪಟ್ಟವು. ಆದ್ದರಿಂದ ಭಗವಂತನು

ಇವೆರಡನ್ನೂ ಮೀರಿರಬೇಕು. ಅವನು ಸಗುಣ ಎಂದು ಹೇಳಿದ ಮೇಲೆ ಅವನು ಸಾಕಾರನೂ ಹೌದು ಎಂದು ಹೇಳುವುದರಲ್ಲಿ ತಪ್ಪೇನೂ ಇಲ್ಲ. ಸಗುಣ ಸಾಕಾರಗಳೆರಡೂ ಆತ್ಯಂತಿಕ ಸತ್ಯವನ್ನು ಪಡೆಯುವ ಸಾಧನಗಳು. ಆದ್ದರಿಂದಲೇ ಶ್ರೀರಾಮಕೃಷ್ಣರು 'ನಿರಾಕಾರವೂ ಸತ್ಯ ಸಾಕಾರವೂ ಸತ್ಯ' ಎಂದು ಹೇಳಿರುವುದು.

ಭಾಗವತದ ಪ್ರಕಾರ, ವಿವಿಧ ಹಂತದ ಭಕ್ತರು ಇರುತ್ತಾರೆ: ಆರಂಭಿಕ ಹಂತದವರು ಯಾವುದಾದರೂ ಒಂದು ದೇವತೆಯ ಮೂರ್ತಿಪೂಜೆಯಲ್ಲಿ ಏಕನಿಷ್ಠೆಯಿಂದ ತೊಡಗಿರುತ್ತಾರೆ. ಬೇರೆ ದೇವತೆಗಳ ಕಡೆಗಾಗಲಿ ವಿಷಯಗಳ ಕಡೆಗಾಗಲಿ ಗಮನ ಕೊಡುವುದಿಲ್ಲ. ತಾವಾಯಿತು, ತಮ್ಮ ಪೂಜೆಯಾಯಿತು — ಹೀಗಿರುತ್ತಾರೆ ಅವರು. ಮಧ್ಯಮ ಹಂತದವರಲ್ಲಿ ಸಾಮಾಜಿಕ ಕಳಕಳಿ ಇರುತ್ತದೆ. ಬೇರೆ ದೇವತೆಗಳನ್ನು ತಮ್ಮ ಆರಾಧ್ಯ ದೇವರ ವಿವಿಧ ರೂಪಗಳಾಗಿ ಗೌರವಿಸುತ್ತಾರೆ, ಭಕ್ತಿ ತೋರಿಸುತ್ತಾರೆ. ಉತ್ತಮ ಹಂತದವರಿಗೆ ಎಲ್ಲವೂ ಭಗವನ್ಮಯವಾಗಿರುತ್ತದೆ, ಕೇವಲ ವಿಗ್ರಹದಲ್ಲಿ ಮಾತ್ರವಲ್ಲದೆ ಎಲ್ಲೆಲ್ಲಿಯೂ ಭಗವಂತನನ್ನೂ ಕಾಣುತ್ತಾರೆ. ಹಂತಹಂತವಾಗಿ ಮುಂದುವರಿಯಬೇಕು. ಮೊದಲೇ ಉತ್ತಮ ಸ್ಥಿತಿಯನ್ನು ಅನುಸರಿಸುವುದು ಬಾಲಿಶ — ಮಗು ದೊಡ್ಡವರ ಶೂ ಹಾಕಿಕೊಂಡು ನಡೆಯುವಂತೆ.

ಶ್ರೀರಾಮಕೃಷ್ಣರೇ ಸಾಕಾರ-ನಿರಾಕಾರಗಳೆರಡೂ ಸತ್ಯ ಎಂದ ಮಾತು 'ಮ' ಮನಸ್ಸಿನಲ್ಲಿ ಗೊಂದಲವನ್ನು ಉಂಟುಮಾಡಿತು. ಪರಸ್ಪರ ವಿರುದ್ಧವಾದ ಈ ಎರಡು ಸ್ಥಿತಿಗಳೂ ಸತ್ಯವಾಗಲು ಹೇಗೆ ಸಾಧ್ಯ ? ಎಂದು ಅವರು ಆಲೋಚಿಸತೊಡಗಿದರು. ಇವೆರಡೂ ಕತ್ತಲೆ-ಬೆಳಕಿನಂತೆ ವಿರುದ್ಧಾವಸ್ಥೆಗಳು ಎಂದು ಹೇಳುವಂತಿಲ್ಲ. ಭಾಷಿಕ ವೈರುಧ್ಯ ವಾಸ್ತವ ವೈರುಧ್ಯವಾಗಬೇಕಾಗಿಲ್ಲ. ಮುದುಕ ಮತ್ತು ಯುವಕ ಇವರೆಡೂ ಭಾಷಿಕವಾಗಿ ವಿರುದ್ಧವಾದರೂ ವಾಸ್ತವವಾಗಿ ಅವರಿಬ್ಬರೂ ವಿರೋಧಿಗಳಾಗಿರಬೇಕಾಗಿಲ್ಲ. ನಿರಾಕಾರವಾದ ನೀರು ಪಾತ್ರೆಗಳಲ್ಲಿ ಸಾಕಾರವಾಗುತ್ತದೆ; ನಿರಾಕಾರವಾದ ವಿದ್ಯುತ್ ಬಲ್ಬಿನಲ್ಲಿ ಸಾಕಾರವಾಗುತ್ತದೆ. ಭಗವಂತನು ಅನಂತವಾಗಿರುವುದರಿಂದ ಅವನಲ್ಲಿ ಎಲ್ಲ ವೈರುಧ್ಯಗಳೂ ಒಂದಾಗುತ್ತದೆ.

ಸೂಫಿ ಸಂತನಾದ ಜಲಾಲ್-ಉದ್-ದಿನ್ ರೂಮಿ ಹೇಳಿರುವ ಒಂದು ಕಥೆ ಈ ಸಂದರ್ಭಕ್ಕೆ ತುಂಬ ಉಚಿತವಾಗಿದೆ: ಮೋಸೆಸ್ ಒಮ್ಮೆ ಹಳ್ಳಿಯ ಪ್ರದೇಶದಲ್ಲಿ ಓಡಾಡುತ್ತಿದ್ದನು. ಅಲ್ಲಿ ರಮಣೀಯ ವಾತಾವರಣವಿದ್ದುದರಿಂದ ಅಲ್ಲಿಯೇ ಕುಳಿತು ಸೌಂದರ್ಯವನ್ನು ಆಸ್ವಾದಿಸುತ್ತಿದ್ದನು. ಸಮೀಪದಲ್ಲಿ ಕುರಿ ಕಾಯುವ ಹುಡುಗ ಹಾಡು ಹೇಳುತ್ತ ಕುರಿಗಳನ್ನು ಮೇಯಿಸುತ್ತಿದ್ದನು. ಆಗ ಸಂಜೆಯ ಸಮಯ. ಪಶ್ಚಿಮಾಚಲವು ಅರುಣ ಕಾಂತಿಯಿಂದ ಶೋಭಿಸತೊಡಗಿತು. ಆ ಹುಡುಗನು ಪಶ್ಚಿಮಾಭಿಮುಖವಾಗಿ ಮಂಡಿಯೂರಿ ಕೈಮುಗಿದು ದೇವರನ್ನು ಪ್ರಾರ್ಥಿಸತೊಡಗಿದನು: ''ಹೇ ಪ್ರಭು, ದಯಾಮಯನೇ, ನಿನಗೆ ಸ್ನಾನ ಮಾಡಲು ಸುವಾಸನೆಯ ಎಣ್ಣೆಯನ್ನು ನೀಡುತ್ತೇನೆ. ಒಳ್ಳೆಯ ಬಿಸಿನೀರಿನಲ್ಲಿ ಸ್ನಾನ ಮಾಡಿಸುತ್ತೇನೆ. ಕುಡಿಯಲು ಬಿಸಿ ಹಾಲನ್ನು ನೀಡುತ್ತೇನೆ,'' ಇತ್ಯಾದಿ. ಮೋಸೆಸ್ ಇದನ್ನು ಕೇಳಿ ಕುಪಿತನಾಗಿ, ಆ ಹುಡುಗನ ಹತ್ತಿರ ಹೋಗಿ ತನ್ನ ದೊಣ್ಣೆಯಿಂದ ಅವನಿಗೊಂದು ಬಿಸಿಮುಟ್ಟಿಸಿ ಹೇಳಿದನು: ''ಎಲವೋ ಮೂರ್ಖ, ಏನಿದು ಅಸಂಬದ್ಧ ಪ್ರಲಾಪ! ದೇವರಿಗೆ ನಮಗಿರುವಂತೆ ದೇಹ ಅಂಗಾಂಗಗಳಿವೆಯೆಂದು ತಿಳಿದುಕೊಂಡೆಯಾ? ಅವನು ನಿರಾಕಾರ ಎಂಬುದು ತಿಳಿಯದೆ ನಿನಗೆ? ದೇಹವಿಲ್ಲದವನಿಗೆ ಸ್ನಾನವೆ? ಬಾಯಿ ಹೊಟ್ಟೆ ಇಲ್ಲದವನು ಹಾಲು ಕುಡಿಯುತ್ತಾನೆಯೆ?'' ಎಂದು ಮುಂತಾಗಿ ಅವನಿಗೆ ಬೈದು ಹೊರಟುಹೋದನು. ಹುಡುಗನು ತಬ್ಬಿಬ್ಬಾಗಿ ಕುಳಿತುಕೊಂಡನು. ಮೋಸೆಸನು ಆ ಕಡೆ ಹೋಗುತ್ತಿರುವಾಗ ಒಂದು ದಿವ್ಯವಾಣಿ ಅವನಿಗೆ ಕೇಳಿಸಿತು: ''ಎಲೈ ಮೋಸೆಸ್! ನೀನೆಂಥ ಮೂರ್ಖ ಕೆಲಸ ಮಾಡಿದೆ! ಆ ಬಾಲಕನ ನಂಬಿಕೆಯನ್ನು ಕೆಡಿಸಿಬಿಟ್ಟೆಯಲ್ಲ! ಅವನು ತನ್ನ ಯೋಗ್ಯತಾನುಸಾರವಾಗಿ ತನ್ನದೇ ರೀತಿಯಲ್ಲಿ ನನ್ನನ್ನು ಆರಾಧಿಸುತ್ತಿದ್ದನು. ನಾನು ಭಾವವನ್ನು ನೋಡುತ್ತೇನೆಯೇ ಹೊರತು ಪೂಜಾವಿಧಾನವನ್ನಲ್ಲ. ಪ್ರತಿಯೊಂದು ಜನಾಂಗದವರಿಗೂ ಅವರವರಿಗನುಗುಣವಾದ ಪೂಜಾವಿಧಾನವನ್ನು ನಾನೇ ವ್ಯವಸ್ಥೆ ಮಾಡಿದ್ದೇನೆ. ಹಿಂದೂಸ್ಥಾನದವರು ತಮ್ಮದೇ ರೀತಿಯಲ್ಲಿ ನನ್ನನ್ನು ಆರಾಧಿಸುತ್ತಾರೆ. ಮುಸಲ್ಮಾನರು ಆರಾಧಿಸುವ ವಿಧಾನವೇ ಬೇರೆ.'' ಮೋಸೆಸ್‌ಗೆ ಅರಿವು ಮೂಡಿತು.

ಮುಂದೆ ಮೃಣ್ಮಯ ಮತ್ತು ಚಿನ್ಮಯಗಳ ವಿಚಾರ ಬರುತ್ತದೆ. ಸಾಕಾರವನ್ನು ಪೂಜಿಸುತ್ತಿರುವಾಗ, ಮೃಣ್ಮಯಮೂರ್ತಿಯೇ ದೇವರಲ್ಲ, ಅದರ ಮೂಲಕ ದೇವರನ್ನು ಪೂಜಿಸುತ್ತಿರುವುದು, ಮಣ್ಣು, ಕಲ್ಲು ಮುಂತಾದವುಗಳನ್ನುಪೂಜಿಸುವುದು ಸರಿಯಲ್ಲ, ಮತ್ತು ಅದು ಕೇವಲ ಸಂಕೇತ ಎಂಬುದನ್ನು ಜನರಿಗೆ ತಿಳಿಸಿಕೊಡಬೇಕು — ಎಂದು 'ಮ' ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಇಲ್ಲಿ ಮೃಣ್ಮಯವೆಂದರೆ ಭೌತಿಕ ಎಂದರ್ಥ. ಮೂರ್ತಿ ಕಲ್ಲಿನದಾಗಲಿ, ಲೋಹದ್ದಾಗಲಿ, ಮರದ್ದಾಗಲಿ ಅದೆಲ್ಲವೂ ಮೃಣ್ಮಯವೇ. ಈ ಮೇಲಿನ ಅಭಿಪ್ರಾಯಕ್ಕೆ ಶ್ರೀರಾಮಕೃಷ್ಣರು ಉತ್ತರಿಸುತ್ತಾರೆ: ''ಒಂದು ಮಣ್ಣಿನ ಪ್ರತಿಮೆಯನ್ನು ಪೂಜಿಸುವುದು ಸರಿಯಲ್ಲ ಅಂತ ಇಟ್ಟುಕೊಂಡರೂ ಅದರ ಮೂಲಕ ತನ್ನ ಪೂಜೆಯೇ ನಡೆಯುತ್ತದೆ ಎಂಬುದನ್ನು ಆತ (ಭಗವಂತ) ಅರಿಯನೆ? ಆತ ಆ ವಿಧದ ಪೂಜೆಯಿಂದಲೇ ಸಂತುಷ್ಟನಾಗುತ್ತಾನೆ... ಪ್ರತಿಮೆ ಮಣ್ಣಿನದಾದರೂ ಆ ವಿಧದ ಪೂಜೆಯ ಆವಶ್ಯಕತೆ ಇದೆ. ಹಲವಾರು ವಿಧದ ಪೂಜಾಕ್ರಮಗಳನ್ನು ಭಗವಂತನೇ ಏರ್ಪಡಿಸಿದ್ದಾನೆ. ಈ ಜಗತ್ತು ಯಾರದೋ ಅವನೇ ಅಧಿಕಾರ ಭೇದಕ್ಕನುಗುಣವಾಗಿ ಇವನ್ನೆಲ್ಲ ಮಾಡಿದ್ದಾನೆ.

''ತಾಯಿ, ತನ್ನ ಮಕ್ಕಳ ಜೀರ್ಣಶಕ್ತಿಗನುಸಾರವಾಗಿ ಆಹಾರ ತಯಾರು ಮಾಡುತ್ತಾಳೆ. ಒಬ್ಬಳಿಗೆ ಐದು ಮಕ್ಕಳಿವೆ ಅಂತಿಟ್ಟುಕೊ. ಆಕೆ ಮೀನನ್ನು ಅಡಿಗೆ ಮಾಡಬೇಕಾಗಿದ್ದರೆ ಮಕ್ಕಳ ರುಚಿ ಜೀರ್ಣಶಕ್ತಿ ಇದಕ್ಕೆ ತಕ್ಕಂತೆ ಭಕ್ಷ್ಯಭೋಜ್ಯಗಳನ್ನು —

ಪಲಾವು, ಉಪ್ಪಿನಕಾಯಿ, ಬಜ್ಜಿ, ಪಲ್ಯ ಸಾರು ಇತ್ಯಾದಿ — ಅಡಿಗೆ ಮಾಡುತ್ತಾಳೆ.''

ವಿಗ್ರಹವೇ ದೇವರೆಂದು ಪೂಜಿಸುವುದೊಂದು. ಈ ರೀತಿ ಪೂಜಿಸಲ್ಪಡುವಾಗ ವಿಗ್ರಹವು ಮೃಣ್ಮಯವಾಗಿ ಉಳಿಯದೆ, ಚಿನ್ಮಯವಾಗುತ್ತದೆ – ಭಗವಂತನೇ ಆ ವಿಗ್ರಹದ ಮೂಲಕ ಆವಿರ್ಭವಿಸಿ ಪೂಜೆಯನ್ನು ಸ್ವೀಕರಿಸುತ್ತಾನೆ. ಶ್ರೀವೈಷ್ಣವ ಸಂಪ್ರದಾಯದಲ್ಲಿ ಇದಕ್ಕೆ ಅರ್ಚಾವತಾರವೆಂದು ಕರೆಯುತ್ತಾರೆ. ವಿಗ್ರಹವು ಭಗವಂತನ ಸಂಕೇತ ಎಂದು ಆರಾಧಿಸುವುದು ಇನ್ನೊಂದು ರೀತಿ. ಇಲ್ಲಿ ಮೇಲಿನ ಪೂಜೆಯಲ್ಲಿರುವಂತೆ ನಿಕಟತೆ ಇರುವುದಿಲ್ಲ.

ಮಕ್ಕಳಿಗೆ ಬೊಂಬೆ ಜೀವಂತವಾಗಿ ಕಾಣುತ್ತದೆ. ಕೇವಲ ನಿರ್ಜೀವ ವಸ್ತುವಲ್ಲ. ಮಾರ್ಟಿನ್ ಬ್ಯೂಬರ್ ಎಂಬ ತತ್ತ್ವಜ್ಞಾನಿಗಳು ಎರಡು ಬಗೆಯ ಸಂಬಂಧವನ್ನು ಗುರುತಿಸುತ್ತಾರೆ: I-Thou ಮತ್ತು I-it. ಮೊದಲನೆಯದರಲ್ಲಿ ನಿಕಟತೆಯಿರುತ್ತದೆ, ಮಾನವೀಯ ಭಾವ ಇರುತ್ತದೆ. ಎರಡನೆಯದರಲ್ಲಿ ಕೇವಲ ಉಪಯುಕ್ತತೆಯೇ ಪ್ರಧಾನ. ವ್ಯಕ್ತಿಗಳನ್ನು ನಮ್ಮ ಉಪಯುಕ್ತತೆಗಾಗಿ ಮಾತ್ರ ಬಳಸಿಕೊಂಡಾಗ ಅವರೊಡನೆ ನಮ್ಮ ಸಂಬಂಧವು 'ನಾನು–ಅದು' ಎಂಬುದಾಗುತ್ತದೆ, ಯಾವ ಮಾನವೀಯ ಕಳಕಳಿಯೂ ಇರುವುದಿಲ್ಲ. ವಿಗ್ರಹವನ್ನೂ ಕೇವಲ ಸಂಕೇತವೆಂದು ಪೂಜಿಸಿದರೆ ಅದರೊಡನೆ ನಮ್ಮ ಸಂಬಂಧ 'ನಾನು–ಅದು' ಎಂದಾಗಿರುತ್ತದೆ, ಆಗ ದೇವರು ನಮ್ಮವನಾಗುವುದಿಲ್ಲ. ಶ್ರೀರಾಮಕೃಷ್ಣರ ಪಾಲಿಗೆ ಅವರು ಪೂಜಿಸುತ್ತಿದ್ದ ಕಾಳಿಯ ವಿಗ್ರಹವು ಚಿನ್ಮಯವಾಯಿತು, ಮೃಣ್ಮಯವಾಗಿ ಉಳಿಯಲಿಲ್ಲ. 'ನಾನು–ನೀನು' ಎಂಬ ಸಂಬಂಧದಡೊನೆ ಪೂಜಿಸಿದರು.

### ಉಪದೇಶದ ಹುಚ್ಚು

ಶ್ರೀರಾಮಕೃಷ್ಣರು ಈ ಸಂದರ್ಭದಲ್ಲಿ ಒಂದು ಬಹುಮುಖ್ಯವಾದ ವಿಷಯವನ್ನು ಹೇಳುತ್ತಾರೆ, 'ಮ' ಅವರನ್ನು ಕುರಿತು: ''ನಿಮ್ಮ ಕಲ್ಕತ್ತದ ಜನರಿಗೆಲ್ಲ ಇದೊಂದೇ ಹುಚ್ಚು — ಕೇವಲ ಲೆಕ್ಚರ್ ಕೊಡೋದು, ಇನ್ನೊಬ್ಬರ ಹೃದಯಕ್ಕೆ ಬೆಳಕು ತರೋದು! ಮೊದಲು ತಮ್ಮ ಹೃದಯಕ್ಕೆ ಯಾವ ರೀತಿ ಬೆಳಕು ತಂದುಕೊಳ್ಳುವುದು ಎಂಬುದರ ಯೋಚನೆಯೇ ಇಲ್ಲ. ಪರರಿಗೆ ತಿಳುವಳಿಕೆ ಕೊಡಲು ಯಾರು ನೀವು?''

ಅನೇಕರಿಗೆ ಇತರರಿಗೆ ಉಪದೇಶ ಮಾಡುವ ಹುಚ್ಚು–ಲೋಕೋದ್ಧಾರದ ಹುಚ್ಚು. ಇದನ್ನು ಆಂಗ್ಲಭಾಷೆಯಲ್ಲಿ Saviour Complex ಎಂದು ಕರೆಯುತ್ತಾರೆ. ಇತರರಿಗೆ ಭಗವದ್ವಿಚಾರವನ್ನು, ಆಧ್ಯಾತ್ಮಿಕ ವಿಚಾರವನ್ನು ತುಂಬಾ ಉತ್ಸಾಹದಿಂದ ಹೇಳುತ್ತಾರೆ. ಆದರೆ ತಾವು ಒಬ್ಬರೆ ಇರುವಾಗ ಅಷ್ಟೇ ಗಂಭೀರವಾಗಿ ದೇವರ ಚಿಂತನೆ ಅಥವಾ ಆತ್ಮಚಿಂತನೆ ಮಾಡದೆ ಇರಬಹುದು. ಓರ್ವ ಕ್ರೈಸ್ತ ಸಂತರ ಹೇಳಿಕೆ ಇಲ್ಲಿ ಸ್ಮರಣಾರ್ಹ: ''ದೇವರ ಬಗ್ಗೆ ಮಾತನಾಡುವುದಕ್ಕಿಂತ ದೇವರೊಡನೆ ಮಾತನಾಡುವುದು ಒಳ್ಳೆಯದು'' (It is better to talk with God than to talk of God) ದೇವರು ಅನುಭವ ವಿಷಯ, ಪ್ರೀತಿ ಇದ್ದಂತೆ. ಗಣಿತ ಮುಂತಾದವುಗಳು ಬುದ್ಧಿವಿಷಯ, ಅವುಗಳ ಬಗ್ಗೆ ಎಷ್ಟು ಬೇಕಾದರೂ ಹೇಳಬಹುದು. ವಿವಿಧ ತಿಂಡಿ ಪದಾರ್ಥಗಳು ಅನುಭವ ವಿಷಯ, ಅವುಗಳ ಬಗ್ಗೆ ಮಾತನಾಡುವುದು ಕಡಿಮೆ. ಹಾಗೆಯೇ ದೇವರ ಬಗ್ಗೆ ಮಾತನಾಡುವುದಕ್ಕಿಂತ ದೇವರನ್ನು ಅನುಭವಿಸುವುದರ ಕಡೆ ಹೆಚ್ಚು ಗಮನವಿರಿಸಬೇಕು. ಯಾರೊ ಒಬ್ಬರು ಸ್ವಾಮಿಗಳು ಹೇಳಿದ ಮಾತು ನೆನಪಿಗೆ ಬರುತ್ತದೆ. ಉಪದೇಶ ನೀಡುವುದೆಂದರೆ ತನಗೆ ಬೇಡವಾದುದನ್ನು ಇತರರಿಗೆ ಕೊಡುವುದು. ನನಗೆ ತುಂಬ ಬಾಯಾರಿಕೆಯಾಗಿರುವಾಗ ನನಗೆ ಸಿಕ್ಕಿದ ನೀರನ್ನು ಎಲ್ಲರನ್ನೂ ಕರೆದು ಹಂಚುವುದಿಲ್ಲ — ಇನ್ನೊಬ್ಬ ಬಾಯಾರಿಕೆಯಾದವನೊಂದಿಗೆ ಅದನ್ನು ಹಂಚಿಕೊಳ್ಳಬಹುದು. ನಾವು ಅನುಭವಿಸಿ ಇತರರಿಗೆ ಆವಶ್ಯಕವಿದ್ದರೆ ಹೇಳಬಹುದು. ''ಹೃದಯ ತುಂಬಿ ಮಾತು ಹೊರ ಹೊಮ್ಮಬೇಕು.''

*(ಮುಂದುವರಿಯುವುದು)*

## ಶ್ರೀಮಾತೆಯವರ ಉಪದೇಶಗಳು



❁ ಶ್ರೀರಾಮಕೃಷ್ಣರ ಆವಿರ್ಭಾವದೊಂದಿಗೆ ಸತ್ಯಯುಗ ಆರಂಭವಾಗಿದೆ. ಅವರೊಂದಿಗೆ ವಿಶಿಷ್ಟ ವ್ಯಕ್ತಿಗಳು ಬಂದಿದ್ದಾರೆ. ನರೇನ್ ಸಪ್ತಋಷಿಗಳ ನಡುವೆ ಪ್ರಧಾನನಾದ ಒಬ್ಬ ಋಷಿ. ಶ್ರೀರಾಮಕೃಷ್ಣರು ಅವನ ಬಗ್ಗೆ, 'ನೂರಾರು ಋಷಿಗಳಲ್ಲಿ ಅವನೊಬ್ಬ' ಎಂದು ಹೇಳಬಹುದಾಗಿತ್ತು ; ಹಾಗೆ ಹೇಳದೆ, ಸಪ್ತರ್ಷಿಗಳಲ್ಲಿ ಒಬ್ಬ ಎಂದರು. ಅರ್ಜುನನೇ ಯೋಗಿನ್ (ಸ್ವಾಮಿ ಯೋಗಾನಂದರು) ಆಗಿ ಬಂದ. ಹೀಗೆ ಪ್ರಧಾನ ವ್ಯಕ್ತಿಗಳು ಎಷ್ಟು ಜನರಿರುತ್ತಾರೆ? ಬಹಳ ಜನರಿರುತ್ತಾರೇನು? ಹುಳಿಮಾವು ಅನೇಕ ಸಿಗಬಹುದು. ಫಜಲಿ ಮಾವು (ಒಂದು ಬಗೆಯ ಒಳ್ಳೆಯ ಮಾವಿನ ಹಣ್ಣು) ಹೆಚ್ಚು ಸಿಗುತ್ತದೇನು? ಸಾಧಾರಣ ಮಂದಿ ಸಾಕಷ್ಟು ಜನ ಹುಟ್ಟುತ್ತಾರೆ, ಸಾಯುತ್ತಾರೆ. ಹೀಗೆ ಯಾರೆಲ್ಲ ತುಂಬ ಪ್ರಧಾನರಾದವರೋ ಅವರು ಭಗವಂತನ ಕಾರ್ಯಕ್ಕಾಗಿ ಅವನೊಂದಿಗೆ ಬರುತ್ತಾರೆ.

❁ ಗಂಗಾತೀರದಲ್ಲಿ ಯಾರು ವಾಸ ಮಾಡುತ್ತಾರೋ ಅವರೆಲ್ಲ ದೇವತೆಗಳು. ದೇವತೆಗಳಲ್ಲದಿದ್ದರೆ ಗಂಗಾತೀರದಲ್ಲಿ ವಾಸ ಮಾಡುವ ಅವಕಾಶ ಲಭಿಸುತ್ತದೇನು? ಅಲ್ಲದೆ, ಅವರು ಪ್ರತಿದಿನವೂ ಗಂಗಾಸ್ನಾನ ಮಾಡುವುದರಿಂದ ಪ್ರತಿದಿನ ಮಾಡಿದ ಪಾಪಗಳು ಅಂದಂದೇ ಕ್ಷಯವಾಗಿ ಹೋಗುವುವು.

'ಶ್ರೀಶಾರದಾದೇವಿ ವಚನವೇದ' ದಿಂದ, ಪು.೨೫೬–೬೪